# ಕೆಟ್ಟ ಕಾಲ ಸರಿಯುವುದು ಎಲ್ಲ ಸರಿಯಾಗುವುದು

**ಕೈತುಂಬ ಅವಕಾಶಗಳನ್ನು ಇಟ್ಟುಕೊಂಡು ಕೊರೊನಾ ಕರಿನೆರಳು ಸರಿಯುವುದನ್ನೇ ಕಾಯುತ್ತಿದ್ದಾರೆ ಕಾವ್ಯಾ ಶೆಟ್ಟಿ. ಭಿನ್ನ ಪಾತ್ರಗಳು, ಭಿನ್ನ ಸಿನಿಮಾಗಳ ಮೂಲಕ ಪ್ರೇಕ್ಷಕರನ್ನು ರಂಜಿಸಲು ಕಾತರರಾಗಿರುವ ಅವರು ಕನ್ನಡದ ವೆಬ್‌ಸೀರೀಸ್ ಒಂದರಲ್ಲಿಯೂ ನಟಿಸಿದ್ದಾರೆ.**

■ ಪದ್ಮನಾಭ ಭಟ್

**2018**ರಲ್ಲಿ ಬಿಡುಗಡೆಯಾದ 'ಸಂಹಾರ' ಮತ್ತು '3 ಗಂಟೆ 30 ದಿನ 30 ಸೆಕೆಂಡ್' ಸಿನಿಮಾಗಳಲ್ಲಿ ನಟಿಸಿದ್ದ ಕಾವ್ಯಾ ಶೆಟ್ಟಿ ನಂತರ ತೆರೆಯ ಮೇಲೆ ಕಾಣಿಸಿಕೊಂಡಿರಲಿಲ್ಲ. ಹಾಗೆಂದು ಪೂರ್ತಿ ಮಾಯವೇನೂ ಆಗಿರಲಿಲ್ಲ. ಸೋಷಿಯಲ್ ಮೀಡಿಯಾದಲ್ಲಿ ತಮ್ಮ ಅಭಿಮಾನಿಗಳಿಗೆ ದರ್ಶನ ಕೊಡುತ್ತಲೇ ಇದ್ದರು. ತೆರೆಯ ಮೇಲೆ ಕಾಣುವುದು ಯಾವಾಗ ಅನ್ನುವಾಗಲೇ ಇದೇ ವರ್ಷ ತೆರೆಕಂಡ 'ಯುವರತ್ನ'ದಲ್ಲಿ ಮಿಂಚಿನಂತೆ ಬಂದು ಮಾಯವಾದರು. 'ನಟಿಯರು ಗೆಸ್ಟ್ ಅಪಿಯರೆನ್ಸ್ ಮಾಡತೊಡಗಿದರು ಅಂದ್ರೆ ಅವರ ಕೆರಿಯರ್ ಅಂತಿಮ ಹಂತದಲ್ಲಿದೆ ಎಂದು ಅರ್ಥ' ಎಂಬುದು ಗಾಂಧಿನಗರದಲ್ಲಿ ಪದೇ ಪದೇ ಕೇಳುವ ಮಾತು. ಆದರೆ ಈ ಮಾತು ಕಾವ್ಯಾ ಅವರ ವಿಷಯದಲ್ಲಿ ನಿಜವಲ್ಲ. 'ಗೆಸ್ಟ್' ಆಗಿ ನಟಿಸಿಯೂ 'ಬೆಸ್ಟ್ ಈಸ್ ಯೆಟ್ ಟು ಕಮ್' (ಅತ್ಯುತ್ತಮವಾದದ್ದು ಇನ್ನೂ ಬರಲಿಕ್ಕಿದೆ) ಎನ್ನುವ ಹಾಗೆ ಕಾವ್ಯಾ ತಮ್ಮ ವೃತ್ತಿಜೀವನದ ಎರಡನೇ ಅಧ್ಯಾಯಕ್ಕೆ ಸಜ್ಜಾಗುತ್ತಿದ್ದಾರೆ.

ಲಾಕ್‌ಡೌನ್‌ಗಿಂತ ತುಸು ಮೊದಲು ಅವರು, 'ಲವ್ ಮಾಕ್ಟೇಲ್' ತೆಲುಗು ರಿಮೇಕ್‌ನಲ್ಲಿ ನಟಿಸುತ್ತಿದ್ದರು. 'ಗುರ್ತುಂಡ ಸೀತಾಕಲಮ್' ಎಂಬ ಹೆಸರಿನ ಈ ಸಿನಿಮಾದಲ್ಲಿ ಅವರು 'ಲವ್ ಮಾಕ್ಟೇಲ್' ಸಿನಿಮಾದಲ್ಲಿ ಅಮೃತಾ ಅಯ್ಯಂಗಾರ್ ಮಾಡಿದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇನ್ನೊಂದು ಪಾತ್ರದಲ್ಲಿ ತಮನ್ನಾ ನಟಿಸುತ್ತಿರುವುದು ವಿಶೇಷ.

ರವಿಚಂದ್ರನ್ ಜತೆಗೆ ನಟಿಸಿರುವ, 'ರವಿ ಬೋಪಣ್ಣ', ಯೋಗಿ ಜತೆಗೆ 'ಲಂಕೆ', ಡ್ಯಾನಿಶ್ ಸೇಠ್ ಜೊತೆಗೆ 'ಸೋಲ್ಡ್' ಇಷ್ಟು ಸಿನಿಮಾಗಳು ಬಿಡುಗಡೆಗೆ ಸಜ್ಜಾಗಿವೆ. ರಾಕ್‌ಲೈನ್ ಪ್ರೊಡಕ್ಷನ್‌ನಲ್ಲಿ ತಯಾರಾದ 'ನಿಮಗೊಂದು ಸಿಹಿಸುದ್ದಿ' ವೆಬ್‌ಸೀರೀಸ್‌ನಲ್ಲಿಯೂ ಅವರು ನಟಿಸಿದ್ದಾರೆ. ಇಷ್ಟು ಅವಕಾಶಗಳಲ್ಲಿ ಪಾಲು ಪಡೆದಿರುವ ಕಾವ್ಯಾ ಅವರಿಗೆ ಇನ್ನಷ್ಟು ಕಥೆಗಳೂ ಬರುತ್ತಿವೆ.

ಕಾವ್ಯಾ ಚಿತ್ರರಂಗಕ್ಕೆ ಬಂದು ಏಳು ವರ್ಷಗಳು ಕಳೆದಿವೆ. ಈ ಪ್ರಯಾಣದ ಬಗ್ಗೆ ತುಂಬ ಖುಷಿಯಿಂದ ಮಾತನಾಡುವ ಅವರು, 'ಇದೊಂದು ಸುದೀರ್ಘ ಪ್ರಯಾಣ. ಈ ಪ್ರಯಾಣದಲ್ಲಿ ನನಗೆ ಸಾಕಷ್ಟು ಒಳ್ಳೆಯ ಅವಕಾಶಗಳು ಸಿಕ್ಕಿವೆ. ಸಿಗುತ್ತಿವೆ. ಈ ವಿಷಯದಲ್ಲಿ ನಾನು ತುಂಬ ಲಕ್ಕಿ' ಎನ್ನುತ್ತಾರೆ.

'ಒಂದಿಷ್ಟು ಸಿನಿಮಾಗಳಲ್ಲಿ ನಟಿಸಿದ ಮೇಲೆ ಒಂದು ಸಿನಿಮಾ ಹೇಗೆ ತಯಾರಾಗುತ್ತದೆ ಎಂಬ ಕುರಿತು ತಿಳಿವಳಿಕೆ ಸಿಗುತ್ತದೆ. ಕೆಲಸದ ಮಾದರಿ ಗೊತ್ತಾಗುತ್ತದೆ. ಹಾಗೆಂದು ನಟನೆ ಸುಲಭವಾಗಿಬಿಡುತ್ತದೆ ಎಂದೇನಲ್ಲ. ಪ್ರತಿ ಸಿನಿಮಾ, ಪ್ರತಿ ಪಾತ್ರವೂ ಹೊಸದೇ. ಪ್ರತಿ ಸಲ ಕ್ಯಾಮೆರಾ ಎದುರು



## ದರ್ಶನ್ ಮಾದರಿ ಸಮೂಹಸ್ವರವಾಗಲಿ

**ಜೂ**ನ್ 5ಕ್ಕೆ ಚಾಲೆಂಜಿಂಗ್ ಸ್ಟಾರ್ ದರ್ಶನ್ ಮಾತನಾಡಿದ ವಿಡಿಯೊ ಒಂದು ವೈರಲ್ ಆಗಿತ್ತು. ಅದರಲ್ಲಿ ಅವರು ರಾಜ್ಯದ 9 ಮೃಗಾಲಯಗಳ ಬಗ್ಗೆ, ಅವುಗಳಲ್ಲಿನ ಪ್ರಾಣಿ ಪಕ್ಷಿಗಳ ಸ್ಥಿತಿಗತಿಗಳ ಬಗ್ಗೆ ಮಾತನಾಡಿದ್ದರು. ಜೊತೆಗೆ ಸದ್ಯದ ಸಂಕಷ್ಟದ ಸ್ಥಿತಿಯಲ್ಲಿ ಪ್ರಾಣಿಗಳನ್ನು ದತ್ತು ತೆಗೆದುಕೊಳ್ಳುವಂತೆ ಮತ್ತು ಧನಸಹಾಯ ಮಾಡುವಂತೆ ಕರೆ ನೀಡಿದ್ದರು.

ದರ್ಶನ್ ಡೈಲಾಗ್‌ಗಳು ತೆರೆಯ ಮೇಲಷ್ಟೇ ಅಲ್ಲ, ವಾಸ್ತವದಲ್ಲಿಯೂ ಎಷ್ಟು ಪರಿಣಾಮಕಾರಿ ಎಂಬುದಕ್ಕೆ ಈ ವಿಡಿಯೊ ಸಾಕ್ಷಿಯಾಯಿತು. ಅವರ ಒಂದು ಮನವಿಗೆ ಎರಡೇ ದಿನಗಳಲ್ಲಿ 25 ಲಕ್ಷ ರೂಪಾಯಿಗಳಿಗೂ ಅಧಿಕ ಹಣ ಹರಿದುಬಂದಿತ್ತು. ಅಷ್ಟೇ ಅಲ್ಲ, ಒಂದೇ ದಿನ ನಿರೀಕ್ಷೆಗೂ ಮೀರಿ ಜನರು ಲಾಗಿನ್ ಆಗಿದ್ದಕ್ಕೆ ಹಣಸಂದಾಯ ಮಾಡುವ ಸಾಫ್ಟ್‌ವೇರ್ ಕ್ರ್ಯಾಶ್ ಆಗಿಬಿಟ್ಟಿತ್ತು. ನಾಲ್ಕು ದಿನಗಳಲ್ಲಿ 40 ಲಕ್ಷ ರೂಪಾಯಿಗೂ ಅಧಿಕ ಹಣ ಮೃಗಾಲಯಗಳ ನಿರ್ವಹಣೆಗೆ ಸೇರಿದೆ. ಮೃಗಾಲಯಗಳ ಹಲವು ಪ್ರಾಣಿ ಪಕ್ಷಿಗಳನ್ನು ದತ್ತು ತೆಗೆದುಕೊಳ್ಳಲೂ ಜನ ಮುಂದೆ ಬಂದಿದ್ದಾರೆ.

ಈ ರೂ. 40 ಲಕ್ಷವನ್ನು ತಾವೇ ನೀಡುವುದು ದರ್ಶನ್‌ಗೆ ಭಾರವಾದದ್ದೇನೂ ಆಗಿರಲಿಲ್ಲ. ಆದರೆ ಅವರು ತಮ್ಮ ಅಭಿಮಾನಿಗಳ, ಸಾರ್ವಜನಿಕರ ಪಾಲ್ಗೊಳ್ಳುವಿಕೆಗೆ ಕರೆ ನೀಡಿದರು. ಖಂಡಿತ ಇದೊಂದು ಮೆಚ್ಚತಕ್ಕ ಮಾದರಿ. ಮೃಗಾಲಯಕ್ಕೆ ಹಣ ನೀಡಿದವರಲ್ಲಿ ಐವತ್ತು ರೂಪಾಯಿ ಕೊಟ್ಟವರೂ ಇದ್ದಾರೆ, ಹಾಗೆಯೇ ಒಂದು ಲಕ್ಷ ರೂಪಾಯಿ ಕೊಟ್ಟವರೂ ಇದ್ದಾರೆ. ಅಂದರೆ ಸಮಾಜದ ಎಲ್ಲ ವರ್ಗದ ಜನರೂ ಇದರಲ್ಲಿ ಭಾಗಿಯಾಗಿದ್ದಾರೆ. ಈ ಭಾಗವಹಿಸುವಿಕೆ ಖಂಡಿತ ಅವರಲ್ಲಿ ಧನ್ಯತೆಯ ಭಾವವನ್ನಷ್ಟೇ ಅಲ್ಲ, ಪ್ರಾಣಿ ರಕ್ಷಣೆಯ ಬಗ್ಗೆ ಹೊಸ ಅರಿವನ್ನೂ ನೀಡುತ್ತದೆ.

ಒಬ್ಬ ಸ್ಟಾರ್ ಸಮಾಜಕ್ಕೆ ನೆರವಾಗುವುದು ಒಳ್ಳೆಯ ಸಂಗತಿಯೇ. ಆದರೆ ಸಮಾಜವೇ ತನ್ನ ಸಹಜೀವಿಗಳ ಸಂಕಷ್ಟಕ್ಕೆ ಮಿಡಿಯುವಂತೆ